# ಹೆಬ್ಬೆ ಸರ್ವಋತು ಸುಂದರಿ



ಮಳೆಗಾಲದಲ್ಲಿ ಮೈದುಂಬಿಕೊಳ್ಳುವ ಜಲಪಾತಗಳು ಬೇಸಿಗೆಯಲ್ಲಿ ಸರಳರೇಖೆಯಂತಾಗುವುದು ಇಲ್ಲವೇ ಅಳಿಸಿಹೋಗುವುದು ಸಾಮಾನ್ಯ. ಆದರೆ, ಹೆಬ್ಬೆಯ ಕಥೆ ಬೇರೆಯೇ. ಆಕೆ ಎಲ್ಲ ಕಾಲದಲ್ಲೂ ಜೀವಂತಿಕೆ ಉಳಿಸಿಕೊಂಡಿರುವ ಜಲರಾಣಿ. ಕೆಮ್ಮಣ್ಣುಗುಂಡಿಗೆ ಸಮೀಪದ ಈ ಜಲಪಾತ ನೋಡುಗರ ಮೈಮನಗಳಲ್ಲಿ ಚೈತನ್ಯ ಉಂಟು ಮಾಡುವಷ್ಟು ಚೇತೋಹಾರಿ.

■ ಸಿದ್ದು ಆರ್.ಜಿ.ಹಳ್ಳಿ

ಮಳೆಗಾಲದಲ್ಲಿ ಭೋರ್ಗರೆದು ಧುಮ್ಮಿಕ್ಕುವ 'ಜಲಸುಂದರಿ'ಯರಿಗೆ ಶುದ್ಧ ಬೇಸಿಗೆ ಎಂಬುದು ವಿಶ್ರಾಂತಿಯ ಸಮಯ. ಒರಟಾದ ಕಲ್ಲು ಬಂಡೆಗಳ ಮೇಲೆ ಮೂಡಿಸಿ ಹೋಗಿರುವ ಚಿತ್ತಾರಗಳನ್ನು ನೋಡಿದರೆ, ಮನಸ್ಸಿನಲ್ಲಿ ಸಾವಿರ ಭಾವಗಳು ಧುಮ್ಮಿಕ್ಕುತ್ತವೆ. ಆದರೆ, ಬರಗಾಲದಲ್ಲೂ ಭರಪೂರವಾಗಿ ಸುರಿಯುವ ಮೂಲಕ ನೋಡುಗರನ್ನು ನಿಬ್ಬೆರಗಾಗಿಸುತ್ತಾಳೆ ಶ್ವೇತಸುಂದರಿ 'ಹೆಬ್ಬೆ'!

ಹೌದು, ವರ್ಷದ 365 ದಿನಗಳಲ್ಲೂ ಧುಮ್ಮಿಕ್ಕುವ 'ಹೆಬ್ಬೆ' ಜಲಪಾತವಿರುವುದು 'ಕಾಫಿ ನಾಡು' ಚಿಕ್ಕಮಗಳೂರು ಜಿಲ್ಲೆಯ ಪ್ರಸಿದ್ಧ ಗಿರಿಧಾಮ ಕೆಮ್ಮಣ್ಣುಗುಂಡಿ ಸಮೀಪದಲ್ಲಿ. ಜಂಗಲ್ ಸಫಾರಿ, ಟ್ರೆಕ್ಕಿಂಗ್, ಸೈಟ್‌ಸೀಯಿಂಗ್ ಈ ಮೂರು ಚಟುವಟಿಕೆಗಳನ್ನು ಒಟ್ಟಿಗೆ ಅನುಭವಿಸುವ ಅಪೂರ್ವ ಅವಕಾಶವನ್ನು ಪ್ರವಾಸಿಗರಿಗೆ ಕಲ್ಪಿಸಿದೆ ಈ ಜಲಪಾತ!

ಚಿಕ್ಕಮಗಳೂರಿನಿಂದ ಕಾಫಿ ಕಣಿವೆಯ ರಸ್ತೆಯಲ್ಲಿ ಕಲ್ಲತ್ತಗಿರಿಗೆ ಹೊರಟ ನಮ್ಮ ಬೈಕ್‌ಗಳಿಗೆ ರಣೋತ್ಸಾಹ. ಆದರೆ ಕಲ್ಲತ್ತಗಿರಿಯ ವೀರಭದ್ರ ದೇವಾಲಯ ತಲುಪಿದ ಮೇಲೆ, ಮನಸ್ಸಿನಲ್ಲಿ ನಿರಾಸೆಯ ಕಾರ್ಮೋಡ ಆವರಿಸಿತು. ಅದಕ್ಕೆ ಕಾರಣ, ದೇವಾಲಯದ ಮುಂಭಾಗವಿರುವ ಮೂರ್ತಿಗಳಿಗೆ ಜಲಾಭಿಷೇಕ ಮಾಡುವಂತೆ ಭೋರ್ಗರೆಯುವ 'ಕಲ್ಲತ್ತಗಿರಿ ಜಲಪಾತ', ಅಕ್ಷರಶಃ ಅರ್ಚಕರು ನೀಡುವ ತೀರ್ಥದಂತೆ ಕಲ್ಲುಬಂಡೆಗಳ ನಡುವೆ ತೊಟ್ಟಿಕ್ಕುತ್ತಿತ್ತು. 'ಬೇಸಿಗೆಯಲ್ಲೂ ಹೆಬ್ಬೆಯಲ್ಲಿ ಒಳ್ಳೆ ನೀರಿದೆ' ಎಂಬ ಪ್ರವಾಸಿಗರ ಮಾತು ಕಿವಿಗೆ ಬಿದ್ದದ್ದೇ ತಡ, ನಮ್ಮ ಬೈಕ್‌ಗಳು ಕೆಮ್ಮಣ್ಣುಗುಂಡಿಯ ರಸ್ತೆಗಳಲ್ಲಿ ಜಿದ್ದಿಗೆ ಬಿದ್ದಂತೆ ಓಡತೊಡಗಿದವು.

ಕೆಮ್ಮಣ್ಣುಗುಂಡಿ 2 ಕಿ.ಮೀ. ಇರುವಾಗಲೇ ಬಲಕ್ಕೆ ಅರಣ್ಯ ತನಿಖಾ ಠಾಣೆ ಕಾಣಿಸಿತು. ಅಲ್ಲಿಂದ 'ಹೆಬ್ಬೆ ಸಿರಿ ಪರಿಸರ ಅಭಿವೃದ್ಧಿ ಸಮಿತಿ'ಯ ಜೀಪ್‌ಗಳ ಮೂಲಕ 8 ಕಿ.ಮೀ. ಸಾಗಿದರೆ 'ಹೆಬ್ಬೆ ಜಲಪಾತ' ಸಿಗುತ್ತದೆ. ಖಾಸಗಿ ವಾಹನಗಳಿಗೆ ಪ್ರವೇಶವಿಲ್ಲ ಎಂಬ ಮಾಹಿತಿ ಸಿಕ್ಕಿತು. 'ಒಂದು ಜೀಪ್ ಟ್ರಿಪ್‌ಗೆ ₹ 3,200 ದರವಿದ್ದು, ಒಟ್ಟಿಗೆ 8 ಮಂದಿ ಪ್ರಯಾಣಿಸಬಹುದು. ಒಬ್ಬರಿಗೆ ₹ 400 ಬೀಳುತ್ತದೆ' ಎಂದು ಚಾಲಕ ಹೇಳಿದಾಗ, ಬಲು ದುಬಾರಿ ಎನಿಸಿತು. ಆದರೆ, ಹೆಬ್ಬೆಯನ್ನು ನೋಡುವ ಹೆಬ್ಬಯಕೆಯಿಂದ ಬೇರೆ ಪ್ರವಾಸಿಗರನ್ನು ನಮ್ಮೊಂದಿಗೆ ಸೇರಿಸಿಕೊಂಡು ಜೀಪ್‌ನಲ್ಲಿ ಹೊರಟೆವು.

## ಅದು ಕಲ್ಲುಗಳ ಹಾದಿ!

ಕಾಡು ಹಾದಿಯ ಕಚ್ಚಾ ರಸ್ತೆಯಲ್ಲಿ ಕಲ್ಲು–ಗುಂಡಿಗಳದ್ದೇ ಕಾರುಬಾರು. ಕಲ್ಲಿನ ಹಾದಿಯಲ್ಲಿ